ನಡೆಸಿಕೊಂಡು ಹೋಗತಕ್ಕದ್ದೆಂದು ಎಲ್ಲರಿಗೂ ಎಚ್ಚರಿಕೆ ಕೊಟ್ಟರು. ಇನ್ನುಮೇಲೆ ಈ ದೇವಸ್ಥಾನದ ಕೆಲಸ ಮಾಡುವ ಎಲ್ಲರಿಗೂ ಸರ್ಕಾರ ಸಂಬಳ ಗೊತ್ತು ಮಾಡುವುದಾಗಿಯೂ ಅದಕ್ಕಾಗಿಯೇ ತಾಸೀಲ್ದಾರರು ಕೂಡ ಬಂದಿದ್ದಾರೆಂದು ಈ ಸಭೆಯ ನಂತರ ಅವರು ಅದನ್ನು ಮಾಡುವರೆಂದೂ, ಎಲ್ಲರೂ ಸಹಕರಿಸಬೇಕೆಂದು ಕೋರಿಕೊಳ್ಳುತ್ತ ತಮ್ಮ ಮಾತನ್ನು ಮುಗಿಸಿದರು. ತಕ್ಷಣ ಏನನ್ನೋ ಮರೆತಿದ್ದವರ ತರಾ ಮತ್ತೆ ಎದ್ದು ನಿಂತು ಭಕ್ತಾದಿಗಳು ಕ್ಷಮಿಸಬೇಕು, ಇನ್ನು ಮೇಲೆ ಈ ದೇವಸ್ಥಾನಕ್ಕೆ ಶ್ರೀ ವಲ್ಮೀಕೋದ್ಭವೆ ಆದಿಶಕ್ತಿ ಶ್ರೀ ಲಕ್ಷ್ಮೀಪರಮೇಶ್ವರಿ ಅಮ್ಮನವರ ದೇವಸ್ಥಾನವೆಂದು ಕರೆಯಲು ಇಲ್ಲಿಗೆ ಆಗಮಿಸಿರುವ ಎಲ್ಲ ವೇದಾಗಮ ಪಂಡಿತರು ಸೂಚಿಸಿರುತ್ತಾರೆ. ಇಂತಹ ಘನವಾದ ಹೆಸರನ್ನು ಸೂಚಿಸಿರುವ ಅವರಿಗೆ ಸಕಲ ಮರ್ಯಾದೆಗಳನ್ನು ಯಥೇಚ್ಛವಾಗಿ ನೆರವೇರಿಸಲು ಎಲ್ಲ ಭಕ್ತಾದಿಗಳಲ್ಲಿ ನನ್ನ ಕೋರಿಕೆ. ಮತ್ತೊಂದು ವಿಶೇಷ ಪ್ರಕಟಣೆ ಅದೇನೆಂದರೆ ಈ ದೇವಸ್ಥಾನದ ಪಕ್ಕದಲ್ಲಿಯೇ ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಸ್ಥಾನವನ್ನು ನಿರ್ಮಾಣ ಮಾಡಿಸುವುದಾಗಿಯೂ, ದೇವಸ್ಥಾನ ಮುಗಿದು ಪ್ರಾರಂಭೋತ್ಸವಕ್ಕೆ ತಿರುಪತಿಯಿಂದ ತಿರುಮಲ ದೇವರನ್ನೇ ಕರೆಸಿ ಅತ್ಯಂತ ವಿಜೃಂಭಣೆಯಿಂದ ಜಾತ್ರೆ ಮಾಡುವುದಾಗಿಯೂ, ತಿರುಪತಿಗೆ ಹೋಗಿ ಸ್ವಾಮಿಯ ದರ್ಶನ ಮಾಡಲಾಗದವರು ಇಲ್ಲಿಯೇ ತಿರುಮಲ ದೇವರ ದರ್ಶನ ಮಾಡಿ ಕೃತಾರ್ಥರಾಗಬಹುದೆಂದು ನುಡಿದಾಗ ಎದುರಿಗೆ ಇದ್ದ ಜನಂಜನವೆಲ್ಲಾ ಜೋರಾಗಿ ಚಪ್ಪಾಳೆ ತಟ್ಟಿ ಧನ್ಯವಾಯಿತು. ಕಾರ್ಯಕ್ರಮ ಮುಗಿದು ಶಾಸಕರು ತಮ್ಮ ಪತ್ನಿಯ ಜೊತೆ ಕಾರನ್ನು ಏರಿದರು. ಹಿಂದೆಯೇ ಹೋದ ತಾಸೀಲ್ದಾರರನ್ನು ಹತ್ತಿರ ಕರೆದು ಅದೇನೋ ಹೇಳುತ್ತಾ ಎಲ್ಲರ ಕಡೆಗೂ ಕೈಮುಗಿಯುತ್ತಾ ಕಾರಿನ ದೂಳನ್ನು ಎಲ್ಲರಿಗೂ ಹಂಚಿ ಹೊರಟುಹೋದರು.

ಗುಡಿಗೌಡನನ್ನು ಪಕ್ಕಕ್ಕೆ ಕರೆದ ತಾಸೀಲ್ದಾರರು ವಾದ್ಯ ಮಾಡುವವರ ವಿವರಗಳನ್ನು ಕೇಳಿ ಕೇಳಿ ಬರೆದುಕೊಳ್ಳುತ್ತಿದ್ದರು. ಜೊತೆಗೆ ಹಿಂದೂಧರ್ಮದ ದೇವತೆಗಳನ್ನು ಅಶ್ಲೀಲ ಮಾತುಗಳಿಂದ ನಿಂದಿಸುವ ಪದ್ಧತಿ ಈ ದೇವಸ್ಥಾನದಲ್ಲಿ ಇದೆಯೆಂದೂ ಇದನ್ನು ತಡೆಗಟ್ಟಬೇಕೆಂದು ಯಾರೋ ತಾಸೀಲ್ದಾರರಿಗೆ ದೂರು ಕೊಟ್ಟಿದ್ದರು. ಆ ದೂರಿನ ವಿಚಾರಣೆಯನ್ನೂ ಆರಂಭಿಸಿದ್ದರು. ಬೇರೆ ಕೈವಾಡದಾರರ ವಿವರಗಳನ್ನು ದಾಖಲಿಸಿಕೊಂಡ ಅವರು ಆಸಾದಿಯ ವಿವರಗಳನ್ನು ತೆಗೆದುಕೊಳ್ಳುವಾಗ, ಆಸಾದಿ ಅಂದ್ರೇನು? ಅವಂದೇನು ಕೆಲಸ ಎಂದೆಲ್ಲ ವಿಚಾರಿಸಿದರು. ಸರಿಯಾಗಿ ಉತ್ತರ ಹೇಳಲು ಆಗದೆ ಕಡೆಗೆ ಆಸಾದಿಯನ್ನೆ ಕರೆದು ಕೇಳಿದರು. ಹನುಮಂತಣ್ಣ ತಾನು ಆಸಾದಿಯೆಂದೂ, ವಂಶಪಾರಂಪರ್ಯವಾಗಿ ಅಮ್ಮನಿಗೆ ಹಲಗೆ ಬಾರಿಸುವವನೆಂದೂ ಬಂಡುಪದಗಳನ್ನು ಹಾಡುವೆನೆಂದೂ ಹನುಮಂತಣ್ಣ ಹೇಳಿಕೊಂಡನು. ಬಂಡುಪದ ಅಂದ್ರೆ? ಎಂದು ಕೇಳಿದ ತಾಸೀಲ್ದಾರರಿಗೆ ಗೌಡ್ರು ಕಿವಿಯಲ್ಲಿ ಏನೋ ಹೇಳಿದರು. ತಕ್ಷಣ ಮುಖ ಕಿವುಚಿಕೊಂಡ ತಾಸೀಲ್ದಾರ್ರು, ಆಸಾದಿಯನ್ನು ಕರೆದು, 'ನೋಡಪ್ಪ ನೀನು ಕೈವಾಡದಾರರ ಪಟ್ಟಿಯಲ್ಲಿ ಬರಲ್ಲ. ನೀನೇನಿದ್ರೂ ಜನಪದ ಕಲಾವಿದ ಅಂತಾ ಕರೆಸಿಕೊಳ್ಳಬಹುದು. ಅರುವತ್ತು ವರುಷ ವಯಸ್ಸಾಗಿದ್ರೆ ನಿನಗೆ ಜನಪದ ಕಲಾವಿದ ಅಂತಾ ಪಿಂಚಣಿಗೆ ರೆಕಮೆಂಡ್ ಮಾಡ್ಬೌದೇ ವಿನಾ ಕೈವಾಡದಾರನೆಂದು ಸಂಬಳ ಕೊಡಂಗಿಲ್ಲ. ಇನ್ನೊಂದು ಆದೇಶ ಏನೂಂದ್ರೆ ಇನ್ನು ಮುಂದೆ ಮುಜರಾಯಿ ದೇವಸ್ಥಾನದ ಎದುರಿಗೆ ಯಾವುದೇ ತರದ ಅಶ್ಲೀಲ ಪದಗಳನ್ನು ಹಾಡುವಂತಿಲ್ಲ. ಹಂಗೇನಾದರೂ ಹಾಡಿದರೆ ಕಾನೂನುಕ್ರಮ ತಗೋಬೇಕಾಗುತ್ತೆ ಹುಷಾರ್' ಎಂದು ಎಚ್ಚರಿಸಿದರು. ಆಕಾಶವೇ ತಲೆಯ ಮೇಲೆ ಕವುಚಿದಂಗಾಗಿ ಅಲ್ಲೇ ಕುಸಿದು ಕುಂತ ಹನುಮಂತಣ್ಣನನ್ನು ಕಂಡ ತಾಸೀಲ್ದಾರರು ಏನಾದ್ರು ಹೆಚ್ಚು ಕಮ್ಮಿಯಾದ್ರೆ ನನ್ನ ತಲೆ ಮೇಲೆ ಬರುತ್ತೆ ಅಂತ ಅವನಿಂದ ಅದೇನೇನೋ ಅರ್ಜಿ ಬರೆಸಿಕೊಂಡು ಹೆಬ್ಬೆಟ್ಟು ಒತ್ತಿಸಿಕೊಂಡು ಇಂತಾದಿನ ನೀನು ಕನ್ನಡ ಸಂಸ್ಕೃತಿ ಇಲಾಖೆಯ ಎದುರಿಗೆ ಹಾಜರಾಗಿ